<u>ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.</u>

**O.S. No.333/2023. P.W.-1.**

ದಿನಾಂಕ:**27.10.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

<u>ಪಾಟೀ ಸವಾಲು:</u> ಪ್ರತಿವಾದಿಯರ ಪರ ಶ್ರೀ ಡಿ ಎಸ್ ಪಿ ವಕೀಲರಿಂದ:-

ನಾನು ಈ ದಾವೆಯನ್ನು ನನ್ನ ಜಮೀನಿಗೆ ಪ್ರತಿವಾದಿಯರು ದನ ಮೇಯಿಸುತ್ತಿದ್ದಾರೆ ಮತ್ತು ಬೆಳೆ ನಾಶ ಮಾಡುತ್ತಿದ್ದಾರೆ ಎಂದು ಸಲ್ಲಿಸಿರುತ್ತೇನೆ. ನನ್ನ ತಂದೆಯ ಹೆಸರು ಭೀಮಾನಾಯ್ಕ ಯಾನೆ ಸೇವ್ಯಾನಾಯ್ಕ. ನನ್ನ ತಂದೆ 15 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ತಂದೆಗೆ ನಾವು ಒಟ್ಟು 7 ಜನ ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು. ದಾವಾ ಸ್ವತ್ತು ನನ್ನ ತಂದೆಗೆ ಸರ್ಕಾರದಿಂದ ದರಖಾಸ್ತುವಿನ ಮೂಲಕ ಬಂದ ಸ್ವತ್ತಾಗಿದ್ದು, ಅವರ ಮರಣದ ನಂತರ ನನ್ನ ತಾಯಿಗೆ ಪೌತಿಯಾದ ಮೇಲೆ ಬಂದಿರುತ್ತದೆ. ದಾವಾ ಸ್ವತ್ತು ನನ್ನ ತಂದೆಯಾದ ಸೇವ್ಯಾನಾಯ್ಕ ದರಖಾಸ್ತುವಿನ ಮೂಲಕ ಬಂದಿರುತ್ತದೆ. ಸೇವ್ಯಾನಾಯ್ಕ ಯಾನೆ ಭೀಮಾನಾಯ್ಕ ರವರ ತಂದೆಯ ಹೆಸರು ಬಿದ್ದ್ಯಾನಾಯ್ಕ. ನಾನು ದಾವಾ ಸ್ವತ್ತಿನ ದರಖಾಸ್ತು / ಸಾಗುವಳಿ ಚೀಟಿಯನ್ನು ನೋಡಿಲ್ಲ.

ನನ್ನ ತಾಯಿಯು ಅವರ ಜೀವಿತ ಕಾಲದಲ್ಲಿ ನನ್ನ ಮತ್ತು ನನ್ನ ತಮ್ಮನ ಮಕ್ಕಳಿಗೆ ಜಂಟಿಯಾಗಿ ದಾವಾ ಸ್ವತ್ತಿನ ಖಾತೆ ಮಾಡಿಸಿಕೊಟ್ಟಿರುತ್ತಾರೆ. ನನ್ನ ಆಧಾರ್ ಕಾರ್ಡಿನಲ್ಲಿ ನನ್ನ ತಂದೆಯ ಹೆಸರು ಭೀಮಾನಾಯ್ಕ ಯಾನೆ ಸೇವ್ಯಾನಾಯ್ಕ ಎಂದು ಇದೆ. ನನ್ನ ತಾಯಿ ನನ್ನ ತಂದೆಯ ಹೆಸರು ಭೀಮಾನಾಯ್ಕ ಯಾನೆ ಸೇವ್ಯಾನಾಯ್ಕ ಎಂದು ಪ್ರಮಾಣ ಪತ್ರ ಮಾಡಿದ್ದು ಸದರಿ ವಿಚಾರ ನನಗೆ ಗೊತ್ತು. ದಾವಾ ಸ್ವತ್ತು ಹೊರತು ಪಡಿಸಿ ನಮಗೆ ಬೇರೆ ಜಮೀನು ಇದೆ. ನಮ್ಮ ಬೇರೆ ಸ್ವತ್ತಿನ ಪಹಣಿಗಳಲ್ಲಿ ನನ್ನ ತಂದೆಯ ಹೆಸರು ಭೀಮಾನಾಯ್ಕ ಯಾನೆ ಸೇವ್ಯಾನಾಯ್ಕ ಎಂಬ ಎರಡೂ ಹೆಸರುಗಳು ನಮೂದು ಇದೆ. ನಾವು ಹಕ್ಕು ಖುಲಾಸೆ ಪತ್ರ ಮಾಡಿಕೊಟ್ಟಾಗ ನಮ್ಮ ಸಹೋದರ ಸಹೋದರಿಯರ ಎಲ್ಲಾರ ಹೆಸರುಗಳು ವಂಶವೃಕ್ಷ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುತ್ತೇವೆ. ಹಕ್ಕು ಖುಲಾಸೆ ಪತ್ರವನ್ನು ನಾವು ಮೂರು ಜನ ಮಾತ್ರ ಮಾಡಿಕೊಂಡಿರುತ್ತೇವೆ.

ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನದಲ್ಲಿ ಇದ್ದೇವೆ. ದಾವಾ ಸ್ವತ್ತಿನಲ್ಲಿ ಮನೆ ಕಟ್ಟಿಲ್ಲ. ದಾವಾ ಸ್ವತ್ತು ಯಾವ ವರ್ಷದಲ್ಲಿ ನನ್ನ ತಂದೆಗೆ ದರಖಾಸ್ತುವಿನ ಮೂಲಕ ಜಮೀನು ಬಂತು ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಒಟ್ಟು 33 ½ ಎಕರೆ ಜಮೀನು ಇದೆ. ನಾವು ಒಟ್ಟು 5 ½ ಎಕರೆ ಜಮೀನಿನ ಸ್ವಾಧೀನದಲ್ಲಿ ಇದ್ದೇನೆ. ನಾನು ಸ್ವಾಧೀನ ಇರುವ ಜಮೀನಿನ ಚೆಕ್ಕುಬಂಧಿ ಪೂರ್ವಕ್ಕೆ ರಸ್ತೆ ನಂತರ ಕುಮಾರಣ್ಣ ರವರ ಜಮೀನು, ಪಶ್ಚಿಮಕ್ಕೆ ಬೆಂಗಳೂರಿನ ಕುನ್ನಪ್ಪರವರ ಜಮೀನು, ಉತ್ತರಕ್ಕೆ ಬಿದ್ದಯ್ಯ ಹನುಮಯ್ಯ ರವರ ಜಮೀನು, ದಕ್ಷಿಣಕ್ಕೆ ಸಿದ್ದಪ್ಪ ರವರ ಸ್ವತ್ತು ಇದೆ.

ಹಕ್ಕು ಖುಲಾಸೆ ಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂಧಿ ಮತ್ತು ದಾವಾ ಸ್ವತ್ತಿನಲ್ಲಿನ ಚೆಕ್ಕುಬಂಧಿ ಒಂದೇ ಇದೆಯೋ ಇಲ್ಲವೋ ಎಂದು ಹೇಳಲು ನನಗೆ ಓದಲು ಬರೆಯಲು ಬರುವುದಿಲ್ಲ. ದಾವಾ ಸ್ವತ್ತಿನಲ್ಲಿ ನಾವು ಈಗ ಹರಳು ಬೆಳೆ ಬೆಳೆದಿದ್ದೇವೆ. ದಾವಾ ಸ್ವತ್ತಿನ ಅಕ್ಕ-ಪಕ್ಕದಲ್ಲಿ ಪ್ರತಿವಾದಿಗಳ ಜಮೀನು ಇರುತ್ತದೆಯೇ ಎಂದರೆ ಸಾಕ್ಷಿಯು ದಾವಾ ಸ್ವತ್ತಿನ ಪಶ್ಚಿಮಕ್ಕೆ ಪ್ರತಿವಾದಿಗಳ ಜಮೀನು ಇದೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ಮತ್ತು ನಾನು ಮಾತನಾಡುತ್ತೇನೆ. ನಾನು ಪ್ರತಿವಾದಿಯರಿಗೆ ನಮ್ಮ ಜಮೀನನ್ನು ಉಳುಮೆ ಮಾಡಲು ಗುತ್ತಿಗೆಗೆ ನೀಡಿರುವುದಿಲ್ಲ.

ನನ್ನ ತಾಯಿ ಸೀತಾಬಾಯಿ 7 ತಿಂಗಳ ಹಿಂದೆ ಮೃಪಪಟ್ಟಿರುತ್ತಾರೆ. ನನ್ನ ತಾಯಿಯ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಕರಿಯನಹಳ್ಳಿ ಗ್ರಾಮವನ್ನು ಹೊರತು ಪಡಿಸಿ ನನಗೆ ಬೇರೆ ಗ್ರಾಮದಲಿ ಅಂದರೆ ಸಖರಾಯಪಟ್ಟಣದ ಅಗ್ರಹಾರತಾಂಡ್ಯದಲ್ಲಿ ಒಂದು 20 ಗುಂಟೆ ಜಮೀನು ಮತ್ತು ಇನ್ನೊಂದು 16 ಗುಂಟೆ ಜಮೀನು ಇದೆ.

ದಾವಾ ಸ್ವತ್ತಿನ ಪಹಣಿಯು ಗಂಗಾನಾಯ್ಕ, ಗೋವಿಂದನಾಯ್ಕ ಮತ್ತು ಕೃಷ್ಣನಾಯ್ಕ ರವರ ಹೆಸರುಗಳಲ್ಲಿ ಬರುತ್ತದೆ. ದಾವಾ ಸ್ವತ್ತಿನ ಸ್ವಾಧೀನದಲ್ಲಿ ನಾನು ಯಾವತ್ತಿಗೂ ಸಹಃ ಇಲ್ಲ ಎಂದರೆ ಸರಿಯಲ್ಲ. ಸೀತಾಬಾಯಿ ಕೋಂ ಭೀಮಾನಾಯ್ಕ ಎಂಬುವವರು ಬೇರೆ ಹಾಗೂ ಸೀತಾಬಾಯಿ ಕೋಂ ಸೇವ್ಯಾನಾಯ್ಕ ಎಂಬುವವರೇ ಬೇರೆ ಬೇರೆ ವ್ಯಕ್ತಿಗಳಾಗಿದ್ದು ನಾನು ಸೀತಾಬಾಯಿ ಕೋಂ ಸೇವ್ಯಾನಾಯ್ಕ ಯಾನೆ ಭೀಮಾನಾಯ್ಕ ಎಂದು ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಸೀತಾಬಾಯಿ

ಕೋಂ ಭೀಮಾನಾಯ್ಕ ರವರು ಇನ್ನೂ ಬದುಕಿದ್ದಾರೆ ಆದರೆ ಸೀತಾಬಾಯಿ ಎಂಬುವವರು ನನ್ನ ತಾಯಿ ಅವರು ಮೃತಪಟ್ಟಿದ್ದಾರೆ ಎಂದು ನಾವು ಕಂದಾಯ ಅಧಿಕಾರಿಯವರಿಗೆ ತಪ್ಪು ಮಾಹಿತಿ ನೀಡಿ ಸುಳ್ಳು ಖಾತೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸುಳ್ಳು ಮಾಹಿತಿ ಎಂದು ತಿಳಿದುಬರುತ್ತದೆ ಎಂಬ ಕಾರಣಕ್ಕೆ ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನಲ್ಲಿ ನಾವು ಯಾವತ್ತಿಗೂ ಸ್ವಾಧೀನದಲ್ಲಿ ಇಲ್ಲದಿದ್ದರೂ ಸಹಃ ನಾವು ದಾವಾ ಸ್ವತ್ತನ್ನು ಲಪಟಾಯಿಸುವ ಸಲುವಾಗಿ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಸೀತಾಬಾಯಿ ಕೋಂ ಭೀಮಾನಾಯ್ಕ ರವರು ದಾವಾ ಸ್ವತ್ತನ್ನು ಉಳುಮೆ ಮಾಡಲು ಬಂದಾಗ ನಾವು ಗಲಾಟೆ ಮಾಡಿ ಕಳುಹಿಸಿರುತ್ತೇವೆ ಎಂದರೆ ಸರಿಯಲ್ಲ. ನಾವು ಉದ್ದೇಶಪೂರ್ವಕವಾಗಿ ಸೀತಾಬಾಯಿ ಕೋಂ ಭೀಮಾನಾಯ್ಕ ರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತನ್ನು ಹೊರತು ಪಡಿಸಿ ನಮ್ಮ ಹೆಸರಿನಲ್ಲಿರುವ ಬೇರೆ ಸ್ವತ್ತುಗಳ ಪಹಣಿಯಲ್ಲಿ ನನ್ನ ತಂದೆಯ ಹೆಸರು ಕೇವಲ ಸೇವ್ಯಾನಾಯ್ಕ ಎಂಬುದಾಗಿ ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವಾ ಸ್ವತ್ತಿನ ಪಹಣಿಯಲ್ಲಿ ಉದ್ದೇಶಪೂರ್ಕವಾಗಿ ಎರಡು ಹೆಸರನ್ನು ನಮೂದು ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ವಾದಪತ್ರದ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನನ್ನ ತಾಯಿ ನೊಂದಣಿ ಮಾಡಿಸಿಕೊಟ್ಟ ನೊಂದಣಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ಅಗತ್ಯವಿದ್ದಲ್ಲಿ ಹಾಜರುಪಡಿಸುತ್ತೇನೆ.

<u>ಮರು ವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.